# 40. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಿಟ್ಟದಹಳ್ಳಿ, ಶಿಕಾರಿಪುರ (ತಾ)




1. **ಶಾಲೆಯ ಹೆಸರು ಹಾಗೂ ಸಂಕ್ಷಿಪ್ತ ಪರಿಚಯ :-** ಭಾರತಾಂಭೆಯ ಇಪ್ಪತ್ತೊಂಭತ್ತು ಮಕ್ಕಳ ಪೈಕಿ ಕರ್ನಾಟಕ ಮಾತೆಯು ಒಬ್ಬಳು. ಇವಳ ಮೂವತ್ತು ಸಹೋದರರ ಪೈಕಿ ಮಲೆನಾಡು ಜಿಲ್ಲೆಯಾದ ಶಿವಮೊಗ್ಗವೂ ಒಂದು. ಈ ಜಿಲ್ಲೆಯಲ್ಲಿ ಬರುವ ಅರೆಮಲೆನಾಡು ತಾಲ್ಲೂಕು ಶಿಕಾರಿಪುರ. ಇಲ್ಲಿಂದ ಸುಮಾರು ಹತ್ತು ಕಿಲೋ ಮೀಟರ್ ದೂರದಲ್ಲಿರುವ ಸುಂದರ ಗ್ರಾಮವೇ ಕಿಟ್ಟದಹಳ್ಳಿ. ಈ ಗ್ರಾಮದಲ್ಲಿ ಸಾ.ಶ. 1942ರಲ್ಲಿ ಸ್ಥಾಪಿತವಾಗಿರುವ ಔಪಚಾರಿಕ ಶಿಕ್ಷಣ ಸಂಸ್ಥೆಯೇ ನಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಿಟ್ಟದಹಳ್ಳಿ. ಇದು ಸುಂದರ ಪರಿಸರದಲ್ಲಿ ನಿರ್ಮಾಣವಾಗಿದ್ದು ಉತ್ತಮವಾದ ವ್ಯವಸ್ಥೆಗಳನ್ನು ಒಳಗೊಂಡಿದೆ.

2. **ಶಿಕ್ಷಕರ ಮಾಹಿತಿ:-**

ಈ ಶಾಲೆಯು ನುರಿತ ಹಾಗೂ ವಿಷಯವಾರು ಬೋಧಕ ಶಿಕ್ಷಕರನ್ನು ಒಳಗೊಂಡಿದೆ. ಇಲ್ಲಿ ಹತ್ತುಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು ಬಹುತೇಕರು ಪದವೀಧರ ಶಿಕ್ಷಕರಾಗಿರುತ್ತಾರೆ. ಇವರಲ್ಲಿ ಒಬ್ಬರು ಮುಖ್ಯೋಪಾಧ್ಯಾಯರು, ಒಬ್ಬರು ದೈಹಿಕ ಶಿಕ್ಷಕರು, ಒಬ್ಬರು ಹಿಂದಿ ಭಾಷಾ ಶಿಕ್ಷಕರು, ಒಬ್ಬರು ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧಕ ಶಿಕ್ಷಕರು, ಮೂರು ಜನ ನಲಿ-ಕಲಿ ತರಗತಿಗಳ ಬೋಧಕ ಶಿಕ್ಷಕರು ಹಾಗೂ ಉಳಿದವರು ಸಾಮಾನ್ಯ ಶಿಕ್ಷಕರಾಗಿ ಬೋಧನಾಕಾರ್ಯ ನಿರ್ವಹಿಸುತ್ತಿದ್ದು ಯಾವುದೇ ಖಾಸಗಿ ಶಾಲೆಗೂ ಕಡಿಮೆ ಇಲ್ಲದಂತೆ ಕಲಿಕಾ-ಬೋಧನಾ ಪ್ರಕ್ರಿಯೆಗಳು ನಡೆಯುತ್ತಿವೆ.



### 3. ಆಕರ್ಷಕ ಸಮವಸ್ತ್ರ ಮತ್ತು ಗುರುತಿನ ಪತ್ರ:–



ಶಾಲೆಯಲ್ಲಿ ಎಲ್ಲಾ ಮಕ್ಕಳು ಒಂದೇ ರೀತಿಯಾಗಿ ಸುಂದರವಾಗಿ ಶಿಸ್ತಿನಿಂದ ಕಾಣಲು ಪಾಲಕ–ಪೋಷಕರು ಹಾಗೂ ಎಸ್‌ಡಿಎಮ್‌ಸಿಯವರು ಸಭೆ ಸೇರಿ ಒಕ್ಕೂರಲಿನಿಂದ ತೀರ್ಮಾನಿಸಿ, ವಿಶೇಷವಾದ ಸುಂದರವಾದ ಸಮವಸ್ತ್ರವನ್ನು ಹಾಗೂ ಗುರುತಿನ ಪತ್ರವನ್ನು ಮಾಡಲಾಯಿತು.

4. **ಮಕ್ಕಳಮಾಹಿತಿ:–** ನಮ್ಮ ಶಾಲೆಯಲ್ಲಿ ಪ.ಜಾತಿ, ಪ.ಪಂಗಡ, ಮುಸ್ಲಿಂ ಹಾಗೂ ಇತರೆ ಹಿಂದುಳಿದ ಜಾತಿ ಸಮೂದಾಯಗಳಿಗೆ ಸೇರಿದ ಸುಮಾರು 200 ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳ ಕಲಿಕಾ ಪ್ರಕ್ರಿಯೆ ಅತ್ಯುತ್ತಮವಾಗಿರುತ್ತದೆ.

### 5. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ:–

ನಮ್ಮ ಶಾಲೆಯು 18+6=24 ಸದಸ್ಯರನ್ನೊಳಗೊಂಡ ಎಸ್.ಡಿ.ಎಂ.ಸಿ ಆಗಿದ್ದು ಇದು 2018–19ನೇ ಸಾಲಿನಲ್ಲಿ ರಚನೆಯಾಗಿದ್ದು ಉತ್ತಮ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡಿದ್ದು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದೆ.

### 6. ಶಾಲಾ ಪರಿಸರ:–



ನಮ್ಮ ಶಾಲೆಯು ಸುಮಾರು ಎಕರೆ ಶಾಲಾ ಜಾಗವನ್ನು ಹೊಂದಿದ್ದು ಇದರ ಪೈಕಿ 2 ಎಕರೆಯಷ್ಟು ಜಾಗದಲ್ಲಿ ಶಾಲಾ ಕಟ್ಟಡ ಹಾಗೂ ಆಟದ ಮೈದಾನವನ್ನು ಹೊಂದಿದ್ದು ಉಳಿದ 2 ಎಕರೆ ಜಾಗದಲ್ಲಿ ಸುಮಾರು 850 ತೇಗದ ಮರಗಳನ್ನು 10 ತೆಂಗಿನ ಮರಗಳನ್ನು 50 ಹೊಂಗೆ ಮರಗಳು 20 ಅಕೇಶಿಯಾ ಮರಗಳನ್ನು ಒಳಗೊಂಡಂತೆ ಅತ್ಯಾಕರ್ಷಕ ಪರಿಸರವನ್ನು ಹೊಂದಿದ್ದು ನೋಡುಗರಿಗೆ ಹರ್ಷವನ್ನು ತರುವಂತಿದೆ.

## 7. ಮಧ್ಯಾಹ್ನ ಬಿಸಿಯೂಟದ ಅಡುಗೆಕೋಣೆ ಮತ್ತುಆಹಾರ ಧಾನ್ಯಗಳ ದಾಸ್ತಾನುಕೊಠಡಿ :-



ಮಧ್ಯಾಹ್ನ ಬಿಸಿಯೂಟ ಯೋಜನೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದುದು ಸರಿಯಷ್ಟೆ, ಇಲ್ಲಿ ನಿರ್ಮಾಣ ವಾಗಿರುವ ಅಡುಗೆಕೋಣೆ ಮತ್ತು ದಾಸ್ತಾನು ಕೋಣೆಗಳು ಅತ್ಯಂತ ಚಿಕ್ಕವುಗಳಾಗಿದ್ದು ಅವುಗಳಲ್ಲಿ 4ಜನ ಅಡುಗೆಯವರು, ಪಾತ್ರೆ ಪರಿಕರಗಳು, ಗ್ಯಾಸ್ ಸ್ಟೊವ್ ಇಟ್ಟಕೊಂಡು ಅಡುಗೆ ಮಾಡಲು ಕಷ್ಟಕರವಾಗಿದೆ. ಇದರಿಂದಾಗಿ ಕೊಠಡಿಯ ಸ್ವಚ್ಚತೆ ತುಂಬಾ ಪ್ರಯಾಸದಾಯಕವಾಗಿದೆ. ನಮ್ಮ ಶಾಲೆಯಲ್ಲಿರುವ ಸುಮಾರು 200 ಕ್ಕೂ ಹೆಚ್ಚು ಮಕ್ಕಳು ಶಾಲಾ ಕಟ್ಟೆಯ ಮೇಲೆ / ಶಾಲಾ ಬಯಲಿನಲ್ಲಿ /ಗಿಡಮರ ನೆರಳಿನಲ್ಲಿ ಕುಳಿತುಕೊಂಡು ಊಟ ಮಾಡುವಂತಾಗಿದೆ. ಆದ್ದರಿಂದ ಕೂಡಲೆ ಹೈಟೆಕ್ ಸೌಲಭ್ಯಗಳನ್ನೊಳಗೊಂಡ 1ಅಡುಗೆಕೋಣೆ, 1 ದಾಸ್ತಾನು ಕೊಠಡಿ ಹಾಗೂ ಕುಳಿತುಕೊಂಡು ಊಟ ಮಾಡಲು ಒಂದು ಭೋಜನಾಲಯವನ್ನು ನಿರ್ಮಿಸಿಕೊಡುವುದು ಅಗತ್ಯವಾಗಿದೆ.

## 8. ಕ್ಷೀರಭಾಗ್ಯಯೋಜನೆಯಡಿವ್ಯವಸ್ಥಿತವಾಗಿ ಹಾಲು ವಿತರಣೆ:-



ಸರ್ಕಾರದ ಕ್ಷಿರಭಾಗ್ಯ ಯೋಜನೆಯ ಅಡಿಯಲ್ಲಿ ನಮ್ಮ ಶಾಲಾ ಮಕ್ಕಳನ್ನು ದಿನಂಪ್ರತಿ ಸಾಲಾಗಿ ಪಂಕ್ತಿಯಲ್ಲಿ ಕುಳ್ಳಿರಿಸಿ ಹಾಲನ್ನು ವಿತರಿಸಲಾಗುತ್ತದೆ.

## 9. ನಲಿ-ಕಲಿ ತರಗತಿಗಳ ನಿರ್ವಹಣೆ:-



ನಮ್ಮ ಶಾಲೆಯಲ್ಲಿ 1ರಿಂದ 3ನೇ ತರಗತಿಯವರಿಗೆ ಸುಮಾರು 70 ಮಕ್ಕಳು ಅಧ್ಯಯನ ಮಾಡು ತ್ತಿದ್ದುದು ಸರಿಯಷ್ಟೆ, ಇವರ ಕಲಿಕೆಯನ್ನು ಸುಗಮ ಹಾಗೂ ಸಂತೋಷದಾಯಕವಾಗಿ ಸುವದೃಷ್ಟಿಯಿಂದ 3 ನಲಿ-ಕಲಿ ಘಟಕಗಳನ್ನು ಸ್ಥಾಪಿಸಿ ಉತ್ತಮ ಪಾಠೋಪಕರಣ ಮತ್ತು ಪೀಠೋಪಕರಣಗಳೊಂದಿಗೆ ಕಲಿಕೆಗೆ ಅವಕಾಶ ಮಾಡಿಕೊಡಲಾಗಿದೆ. ಎಲ್ಲಾ ಮಕ್ಕಳು ಪಾಠಕ್ಕೆ

ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಉತ್ತಮ ಕಲಿಕೆ ನಡೆಯುತ್ತದೆ.

## 10. ಸ್ಮಾರ್ಟ್‌ಕ್ಲಾಸ್ :-



ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಬದುಕುವ ನಾವು ಭಾವಿ ಪ್ರಜೆಗಳನ್ನು ಈ ತಂತ್ರಜ್ಞಾನಕ್ಕೆ ಅಣಿಗೊಳಿಸುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತಾ ಕೇಳಿ ಕಲಿ-ನೋಡಿ ತಿಳಿ ಎಂಬತತ್ವದ ಹಿನ್ನಲೆಯಲ್ಲಿ ಮಕ್ಕಳ ಕಲಿಕೆಯನ್ನು ಸದೃಢಗೊಳಿಸಲು ಕಲಿಕೆಯ ವಿಷಯಗಳಿಗೆ ಸಂಬಂಧ ಪಟ್ಟಂತೆ ಸ್ಮಾರ್ಟ್‌ಕ್ಲಾಸ್‌ನಲ್ಲಿ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವುದರ ದೃಷ್ಟಿಯಿಂದ ಎಲ್ಲಾ ಗ್ರಾಮಸ್ಥರು ದಾನಿಗಳು ಹಾಗೂ ಎಲ್ಲಾ ಶಿಕ್ಷಕರ ಸಹಕಾರದಿಂದ ಹಣವನ್ನು ಸಂಗ್ರಹಮಾಡಿ ಒಂದು ಸುಂದರವಾದ ಸ್ಮಾರ್ಟ್‌ಕ್ಲಾಸನ್ನು ನಿರ್ಮಾಣ ಮಾಡಿದ್ದೇವೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ. ಈ ಸ್ಮಾರ್ಟ್‌ಕ್ಲಾಸನ್ನು ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರು ಉದ್ಘಾಟನೆ ಮಾಡಿರುತ್ತಾರೆ. ಇದನ್ನು ನಮ್ಮ ಕ್ಷೇತ್ರ ಸಮನ್ವಯಾಧಿಕಾರಿಗಳು ಸಾಕ್ಷೀಕರಿಸಿದ್ದು ಖುಸಿಯಾಗಿದೆ.

**11. ಶಾಲಾ ಕಾಂಪೌಂಡ್:-** ನಮ್ಮ ಶಾಲೆಯು ವಿಶಾಲವಾದ ಜಾಗವನ್ನು ಹೊಂದಿದ್ದು ಶಾಲೆಯ ಮಂಭಾಗ ಮತ್ತು ಶಾಲೆಯ ಅಕ್ಕಪಕ್ಕ ಕಾಂಪೌಂಡ್ ಆಗಿದ್ದು ಸರಿಯಷ್ಟೆ. ಇನ್ನೂ ಶಾಲೆಯ ಹಿಂಭಾಗದಲ್ಲಿ ಕಾಂಪೌಂಡ್ ಅಪೂರ್ಣಗೊಂಡಿದ್ದು ಅದನ್ನು ಪೂರ್ಣಗೊಳಿಸಬೇಕಾಗಿದೆ. ಹಾಗೂ ಶಾಲೆಯ ಮುಂಭಾಗದಲ್ಲಿ ಸುಂದರವಾದ ಶಾರದಾ ಮಾತೆಯ ವಿಗ್ರಹದೊಂದಿಗೆ ಇರುವ ಶಾಲಾ ಬಾಲಕ ಬಾಲಕಿಯರ ಮೂರ್ತಿಗಳು ನೋಡಲು ನಯನಾಕರ್ಷಕವಾಗಿದ್ದು ಮಕ್ಕಳನ್ನು ಶಾಲೆಗೆ ಕೈಬಿಸಿ ಕರೆಯುತ್ತವೆ.

## 12. ಶಾಲಾ ಮುನ್ನೋಟಗಳು:-

* **ಪ್ರತ್ಯೇಕವಾದ** ವಿಜ್ಞಾನ ಪ್ರಯೋಗಾಲಯ ಮತ್ತು ಗ್ರಂಥಾಲಯದ ಅಗತ್ಯವಿದೆ.
- ಶಾಲಾ ಸಿಬ್ಬಂಧಿಗೆ ವಿಶ್ರಾಂತಿ ಕೊಠಡಿ.
- ಶಾಲಾ ಸೊಬಗನ್ನು ಹೆಚ್ಚಿಸಲು ವರ್ಲಿಚಿತ್ರ ಬರಹಗಳನ್ನು ಬರೆಸುವುದು.
- ಶುದ್ಧಕುಡಿಯುವ ನೀರಿಗಾಗಿ ಫೀಲ್ಟರ್ ಅಳವಡಿಸುವುದು.
- ಹಾಳಾಗಿರುವ ಶೌಚಾಲಯಗಳನ್ನು ತೆರವುಗೊಳಸಿ ಹೊಸ ಹೈಟೆಕ್ ಶೌಚಾಲಯಗಳನ್ನು ನಿರ್ಮಿಸುವುದು.
- ಕಿರಿದಾಗಿರುವ ಶಾಲಾ ಕೊಠಡಿಗಳನ್ನು ತೆರವುಗೊಳಸಿ ದೊಡ್ಡದೊಡ್ಡ ಕೊಠಡಿಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಕಲಿಕೆಗೆ ಅನುವು ಮಾಡಿಕೊಡುವುದು
- ಪ್ರತ್ಯೇಕವಾದ ಮುಖ್ಯೋಪಾಧ್ಯಾಯರ ಕೊಠಡಿಯನ್ನು ನಿರ್ಮಿಸುವುದು.
- ಪರಿಸರ ಮಿತ್ರ ಶಾಲಾ ಪ್ರಶಸ್ತಿಗೆ ಸ್ಪರ್ಧಿಸುವುದು.
- ಶಾಲಾ ಧನ್ವಂತರಿ ವನ ಮತ್ತು ಕೈತೋಟ ನಿರ್ಮಾಣ ಮಾಡುವ ಉದ್ದೇಶಗಳನ್ನು ಹೊಂದಲಾಗಿದೆ.